ಜೀವನ ಸಾರ್ಥಕವಾಗುತ್ತೆ" ಎಂದು ಭಾವಿಸಿದ ಅವರು ಆ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಆ ಹುಲಿ ಸ್ವಲ್ಪ ಸಮಯ ಹಾಗೇ ಕುಳಿತು ಅಲ್ಲಿಂದ ನಿರ್ಗಮಿಸಿತು. ದೇವರನ್ನೇ ನಂಬಿ ಹೊರಟ ಅವರಿಗೆ ದೇವರು ಕಾಲಕಾಲಕ್ಕೆ ಅವರ ಯೋಗಕ್ಷೇಮವನ್ನು ವಹಿಸುತ್ತ ಅವರಿಗೆ ಆಗಿನ ಕಾಲದ ರಾಜರು ಮಹಾರಾಜರ ವತಿಯಿಂದಲೂ ಆದರಾತಿಥ್ಯಗಳನ್ನು ಒದಗಿಸಿದ.

ಅದೇ ರೀತಿ ಕಾಸರಗೋಡು ಬಳಿಯ ಆನಂದಾಶ್ರಮದ ಸ್ವಾಮಿ ರಾಮದಾಸರು ರಾಮನ ಕಿಂಕರರಾಗಿ ದೇವರ ಮೇಲೆ ಭಾರಹಾಕಿ ಬರಿಗೈಯಲ್ಲೇ ಕಾಲ್ನಡಿಗೆಯಲ್ಲಿ ಒಬ್ಬಂಟಿಗರಾಗಿ ಹಿಂದುಸ್ತಾನವನ್ನು ಸುತ್ತುವಾಗ ದೇವರು ಅವರ ಕೈಬಿಡಲಿಲ್ಲ. ಹೀಗೆ ಅನೇಕ ಆಧುನಿಕ ಸಂತರೂ ಕೂಡ ಆತ್ಮಸಮರ್ಪಣಾ ಭಾವದಿಂದಲೇ ದೇವರ ಸಾನುರಾಗ ಪ್ರೀತಿ ಪಡೆದು ಸಂಸಾರ ಸಾಗರವನ್ನು ದಾಟಿದ್ದಾರೆ.

ಆತ್ಮಸಮರ್ಪಣೆಯೆಂದರೆ ನದಿ ಸಾಗರವನ್ನು ಸೇರಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತೆ. ಆಗ ಜೀವಾತ್ಮನ ಸಂಕಲ್ಪಗಳೆಲ್ಲ ಪರಮಾತ್ಮನ ಸಂಕಲ್ಪದಲ್ಲಿ ಲೀನವಾಗಿ ಸಾಧಕನಿಗೆ ಬಂದೊದಗುವ ಸುಖದುಃಖ, ಕಷ್ಟಸುಖಗಳೆಲ್ಲ ಆ ಭಗವಂತನ ಲೀಲೆಯೆಂದು ಗೋಚರಿಸಿ ಅವನು ಪ್ರಪಂಚದ ಬಂಧನಗಳಿಂದ ವಿಮುಕ್ತಿ ಪಡೆಯುತ್ತಾನೆ. ಈ ಆತ್ಮಸಮರ್ಪಣಾಭಾವ ಮನುಷ್ಯನ ಹೃದಯದಲ್ಲಿ ಅಂಕುರಿಸಲು ಎರಡು ಸಂಗತಿ ಅಗತ್ಯ. ಒಂದು ದೇವರಿದ್ದಾನೆಂಬ ದೃಢ ವಿಶ್ವಾಸ, ಮತ್ತೊಂದು ಆತನು ಮಾಡುವುದೆಲ್ಲ ನಮ್ಮ ಒಳಿತಿಗಾಗಿಯೇ ಎಂಬ ಭರವಸೆ. ಆ ನಂಬಿಕೆ ಶ್ರದ್ಧೆಯ ರೂಪ ತಾಳಿದಾಗ ಆವಿರ್ಭವಿಸುವ ಚಿಂತನೆಯೇ ಭಕ್ತಿ. ಹಾಗೆ ಪ್ರಾದುರ್ಭಾವಗೊಳ್ಳುವ ಭಕ್ತಿಯೇ ಆತ್ಮಸಮರ್ಪಣೆಯ ಶ್ರೇಷ್ಠ ಪ್ರಕಾಶ.

ಪ್ರಸ್ತುತ ಕಾಲದಲ್ಲಿ, ನೀಗಲಾರದ ಅದೆಷ್ಟೋ ಸಮಸ್ಯೆಗಳ ಭಾರ ತಲೆಯಮೇಲೆ ಹೊತ್ತು, ಇತ್ತ ಬದುಕಲಾರದೆ ಅತ್ತ ಸಾಯಲಾರದೆ ಮಾನಸಿಕ ಉದ್ರೇಕತೆಯಿಂದ ನರಳುತ್ತ ತ್ರಿಶಂಕು ಸ್ವರ್ಗ ಅನುಭವಿಸುತ್ತಿರುವ ಅನೇಕ ಆಧುನಿಕ ಮಾನವರಿಗೆ ಮನಸ್ಸಿನ ಸಾಂತ್ವನ ಪಡೆಯಲು ಆತ್ಮಸಮರ್ಪಣೆ ಒಂದು ತಾರಕ ಮಂತ್ರವಾಗಿ ಫಲಪ್ರದವಾಗುವುದರಲ್ಲಿ ಎರಡು ಮಾತಿಲ್ಲ.

✤

## ಪ್ರಹಸನ ಪ್ರಸಂಗ

ಈ ಪ್ರಪಂಚದಲ್ಲಿ ಕೆಲವರು ಇತರರ ದುಃಖವನ್ನು ನಿವಾರಿಸಲು ಪ್ರಯತ್ನಿಸುತ್ತಾರೆ. ಮತ್ತೆ ಕೆಲವರು ಇತರರ ದುಃಖದ ಪ್ರಯೋಜನವನ್ನು ಪಡೆದು ತಮ್ಮ ಸ್ವಾರ್ಥವನ್ನು ಸಾಧಿಸುತ್ತಾರೆ. ಇತರರ ದುಃಖವನ್ನು ನಿವಾರಿಸಬೇಕಾದವರೆ ಈ ರೀತಿ ಸ್ವಾರ್ಥಸಾಧಕರಾದರೆ ಅವರನ್ನು ಅಸುರರ ಅಪರಾವತಾರವೆಂದೇ ಕರೆಯಬೇಕು..

ಒಬ್ಬ ವೈದ್ಯನು ರಜ ತೆಗೆದುಕೊಂಡು ಪರ ಊರಿಗೆ ಹೋಗಬೇಕಿತ್ತು. ಆಗ ತಾನೆ ವೈದ್ಯಕೀಯ ಪದವಿಯನ್ನು ಪಡೆದಿದ್ದ ತನ್ನ ಮಗನಿಗೆ ತನ್ನ ಕೆಲಸವನ್ನು ವಹಿಸಿಹೋದನು. ಹಿಂದಿರುಗಿ ಬಂದ ಮೇಲೆ, "ಕೆಲಸ ಹೇಗೆ ನಡೆಯುತ್ತಿದೆ?"ಎಂದು ಮಗನನ್ನು ವಿಚಾರಿಸಿದ.

ಮಗನು ಉತ್ಸಾಹದಿಂದ ಹೇಳಿದ: "ಅಪ್ಪ, ನಿನಗೆ ಆ ಸಿದ್ದಪ್ಪ ಮತ್ತು ನಾಗಪ್ಪ ಗೊತ್ತಲ್ಲವೆ? ಅವರು ನಿನ್ನಿಂದ ಬಹಳ ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ನನ್ನ ಔಷಧಿಯಿಂದ ಒಂದೇ ವಾರದಲ್ಲಿಯೇ ಅವರ ರೋಗ ವಾಸಿಯಾಯಿತು."

ತಂದೆಯು ಹೇಳಿದ: "ಹೌದೆ! ಛೆ! ಇಷ್ಟು ವರ್ಷ ನಿನ್ನ ಶಿಕ್ಷಣಕ್ಕೆ ಹಣ ಒದಗಿಸುತ್ತಿದ್ದವರು ಯಾರೆಂದು ನಿನಗೆ ಗೊತ್ತೇನು!"

❖ ❖ ❖

ನಮಗೆ ಕಷ್ಟ ಸಂಕಟಗಳು ಬಂದಾಗ ಅವು ಭಗವಂತನ ಪ್ರೀತಿಯ ಕೊಡುಗೆಗಳು ಎಂದು ಪರಿಗಣಿಸಬೇಕು ಎಂದು ಉಪದೇಶಿಸಲಾಗುತ್ತದೆ. ಅವೆಲ್ಲ ಬರುವುದು ನಮ್ಮ ಪಾಪವನ್ನು ತೊಳೆಯುವುದಕ್ಕೆ ಎಂದೂ ಹೇಳಲಾಗುತ್ತದೆ. ಆದರೆ ಈ ಉಪದೇಶ ಎಲ್ಲರಿಗೂ ಅನ್ವಯಿಸದೆ ಇರಬಹುದು. ಆಧ್ಯಾತ್ಮಿಕ ಸಾಧಕರಿಗೆ ಮತ್ತು ಶರಣಾಗತಿಯ ಭಾವವುಳ್ಳವರಿಗೆ ಇಂತಹ ಉಪದೇಶಗಳು ಸಮಾಧಾನವನ್ನು ನೀಡಬಹುದು. ಆದರೆ ದೃಢವಾದ ಅಧ್ಯಾತ್ಮಶ್ರದ್ಧೆ ಇಲ್ಲದವರಿಗೆ ಇಂತಹ ಉಪದೇಶ ಅವರ ನೋವನ್ನು ಇನ್ನೂ ಹೆಚ್ಚಿಸಬಹುದು. ಆದ್ದರಿಂದ ಅವರವರ ಮನೋಭಾವಕ್ಕೆ ತಕ್ಕಂತೆ ಸಮಾಧಾನವನ್ನು ನೀಡಬೇಕು.

ಓರ್ವ ಬಾಲಕ ತುಂಬ ಕಾಯಿಲೆಯಿಂದ ನರಳುತ್ತಿದ್ದ. ಕ್ರೈಸ್ತ ಪಾದ್ರಿಯೊಬ್ಬನು ಅವನಿಗೆ ಈ ರೀತಿ ಸಮಾಧಾನ ನೀಡಿದನು: "ನೋಡು ಮಗು, ಭಗವಂತನು ಕಷ್ಟವನ್ನು ಕಳಿಸುತ್ತಿರುವುದಕ್ಕಾಗಿ ನೀನು ಸಂತೋಷ ಪಡಬೇಕು. ಈ ಕಷ್ಟಗಳೆಲ್ಲ ಯೇಸುಕ್ರಿಸ್ತನ ಚುಂಬನಗಳು."

ಬಾಲಕ ಹೇಳಿದ : "ಹಾಗಾದರೆ ನನ್ನನ್ನು ಇಷ್ಟೊಂದು ಚುಂಬಿಸುವುದು ಬೇಡವೆಂದು ಯೇಸುಕ್ರಿಸ್ತನಿಗೆ ದಯವಿಟ್ಟು ಹೇಳಿ."

❖ ❖ ❖

ವ್ಯಕ್ತಿಯೊಬ್ಬನು, "ನಿನ್ನ ತಂದೆಗೆ ವಯಸ್ಸೆಷ್ಟು?" ಎಂದು ಒಬ್ಬ ಬಾಲಕನನ್ನು ಕೇಳಿದನು.

"ಅವನಿಗೆ ನನ್ನಷ್ಟೇ ವಯಸ್ಸು."

"ಅದು ಹೇಗೆ ಸಾಧ್ಯ?"

"ಅವನು ತಂದೆಯಾದದ್ದು ನಾನು ಹುಟ್ಟಿದ ನಂತರವೇ."